**<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹೊನ್ನಾವರ. ಸಿ.ಸಿ ನಂ.297/2026.</u>**

| | |
|---|---|
| ಪಿರ್ಯಾದುದಾರರುಃ- | ಜನತಾ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್,<br>ಶಾಖೆಃ ಮಂಕಿ, ತಾಃ ಹೊನ್ನಾವರ, (ಉ.ಕ)<br>ಪ್ರತಿನಿಧಿಸುವವರು ನಿಷ್ಪತ್ ಮ್ಯಾನೇಜರ್,<br>ಶ್ರೀ ಮಂಜುನಾಥ ಗೋವಿಂದ ಕೋಡಿಹಿತ್ಲು,<br>ವಯಸ್ಸು ಸುಮಾರು 54 ವರ್ಷ,<br>ಸಾಕೀನಃ ಕೋಡಿಹಿತ್ತಲು, ಪೋಸ್ಟಃ ಶಿರಾಲಿ,<br>ತಾಃ ಭಟ್ಕಳ, (ಉ.ಕ). |

**-ವಿರುದ್ಧ-**

| | |
|---|---|
| ಆರೋಪಿಯ ಹೆಸರುಃ- | ಈಶ್ವರ ಮಂಜುನಾಥ ಖಾರ್ವಿ,<br>ವಯಸ್ಸು ಸುಮಾರು 40 ವರ್ಷ,<br>ಉದ್ಯೋಗಃ ರೈತಾಬಿ,<br>ಸಾಕೀನಃ- ಹೌಸ್ ನಂ.404, ಹಳೇಮಠ,<br>ಅಂಚೆಃ ಮಂಕಿ,<br>ತಾಲೂಕುಃ- ಹೊನ್ನಾವರ, (ಉ.ಕ). |

* * * * *

**<u>ಆಪಾದನೆ</u>**

ಶ್ರೀ **ನವೀನ್ ಕೋಪರ್ಡೆ.,** ಬಿ.ಎ.,ಎಲ್.ಎಲ್.ಬಿ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯಾದ ನಾನು ಆರೋಪಿಯಾದ ನಿಮ್ಮ ಮೇಲೆ ಈ ಕೆಳಕಂಡ ಆಪಾದನೆ ಹೊರಿಸುತ್ತಿದ್ದೇನೆ.

ಪಿರ್ಯಾದಿ ಸಂಸ್ಥೆಯಲ್ಲಿ ಗುಲಾಬಿ ಮಂಜುನಾಥ ಖಾರ್ವಿರವರು ರಂದು ರೂ.50,000/- ಸಾಲವನ್ನು ಪಡೆದುಕೊಂಡಿದ್ದು, ಸದರಿ ಸಾಲಕ್ಕೆ ಆರೋಪಿಯಾದ ನೀವು ಜಾಮೀನುದಾರರಿದ್ದು, ಸದ್ರಿ ಸಾಲವನ್ನು ಹಿಂತಿರುಗಿಸುವಂತೆ ಕೇಳಿದಾಗ, ಸದರಿ ಸಾಲಕ್ಕೆ ಸಂಬಂಧಪಟ್ಟಂತೆ ನೀವು ಪಿರ್ಯಾದಿ ಸಂಸ್ಥೆಯ ಹೆಸರಿಗೆ ನಿಮ್ಮ ಬ್ಯಾಂಕ್ ಖಾತೆಯುಳ್ಳ **ಇಂಡಿಯನ್ ಓವರಸೀಸ್ ಬ್ಯಾಂಕ್., ಹೊನ್ನಾವರ** ಶಾಖೆಯ ಚೆಕ್ ನಂ.491555 ನ್ನು ದಿನಾಂಕ 05-01-2026 ರಂದು ರೂ.69,300/- ಎಂದು

ನಮೂದಿಸಿ ಚೆಕ್ ಗೆ ಸಹಿ ಮಾಡಿಕೊಟ್ಟು, ಸದರಿ ಚೆಕ್ ನ್ನು ಬ್ಯಾಂಕ್ ಗೆ ಹಾಜರುಪಡಿಸಿದ ಕೂಡಲೇ ಹಣ ಸಿಗುತ್ತದೆ ಎಂದು ಭರವಸೆ ನೀಡಿದ್ದು, ಅದರಂತೆ ಪಿರ್ಯಾದಿ ಸಂಸ್ಥೆಯವರು ಹಣ ಪಡೆಯುವ ಸಲುವಾಗಿ ಸದರಿ ಚೆಕನ್ನು ಅವರ ಖಾತೆಯಿರುವ **ದಿ. ಭಟ್ಕಳ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್., ಮಂಕಿ** ಶಾಖೆಯಲ್ಲಿ ಹಾಜರುಪಡಿಸಿದಾಗ, ಸದರಿ ಬ್ಯಾಂಕ್ ನವರು, '**Drawers signature Differ**' ಎಂದು ತಿಳಿಸಿ ಸದರಿ ಚೆಕನ್ನು ದಿನಾಂಕ 08-01-2026 ರಂದು ಮೆಮೋದೊಂದಿಗೆ ವಾಪಾಸ್ ನೀಡಿರುತ್ತಾರೆ. ಈ ಕುರಿತು ಪಿರ್ಯಾದಿಯವರು ನಿಮಗೆ ವಕೀಲರ ಮೂಲಕ ದಿನಾಂಕ 19-01-2026 ರಂದು ರಿಜಿಸ್ಟರ್ ನೋಟಿಸ್ ಕಳುಹಿಸಿದ್ದು, ಸದರಿ ನೋಟಿಸ್ "Unclaimed" ಎಂಬ ಹಿಂಬರಹದೊಂದಿಗೆ ದಿನಾಂಕಃ 24-01-2026 ರಂದು ವಾಪಸ್ಸು ಬಂದಿದ್ದು, ನೀವು ಸದರಿ ಚೆಕ್ ನಲ್ಲಿ ನಮೂದಿಸಿದ ಹಣವನ್ನು ಸಹ ನೀಡದೇ ನೆಗೋಶಿಯೇಬಲ್ ಇನ್ ಸ್ಟ್ರುಮೆಂಟ್ ಕಾಯಿದೆ ಕಲಂ.138 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ಪ್ರಶ್ನೆ1: ಈಗ ನಿಮಗೆ ಓದಿ ಹೇಳಿದ ಆಪಾದನೆ ತಿಳಿಯಿತೇ?

ಆರೋಪಿಯ ಉತ್ತರ : ತಿಳಿಯಿತು

ಪ್ರಶ್ನೆ 2: ಸದ್ರಿ ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೇ?

ಆರೋಪಿಯ ಉತ್ತರ : ವಿಚಾರಣೆಯಾಗಬೇಕು

<u>**ನ್ಯಾಯಾಲಯವು ಆರೋಪಿಗೆ ಈ ಕೆಳಗಿನ ಪ್ರಶ್ನೆಗಳನ್ನು ಹಾಕಲಾಗಿರುತ್ತದೆ.**</u>

| | | |
|---|---|---|
| 1. | Do you admit that the cheque belongs to your account? | Yes |
| 2. | Do you admit that signature on the cheque is yours? | No |
| 3. | Did you issue/deliver this cheque to the complainant? | No |
| 4. | Do you admit that you owed liability to | No |

| | | |
|---|---|---|
| | to the complainant? | |
| 5. | If you deny liability, states clearly defence:<br>a) Security cheque only,<br>b) Loan repaid already,<br>c) Cheque altered/misused,<br>d) other (Specify). | b) Loan repaid already. |
| 6. | Do you wish to compound the case at this stage? | Yes |

**(ಈ ಮೇಲಿನ ಆಪಾದನೆಯನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ, ತಿಳಿಸಿ, ವಿವರಿಸಿ ಹೇಳಿ ಅವರು ನೀಡಿದ ಉತ್ತರಗಳನ್ನು ಬರೆದುಕೊಳ್ಳಲಾಗಿದೆ ಅಂತ ದೃಢೀಕರಿಸುತ್ತೇನೆ.)**

ಸಹಿ ಇದೆ/-

**ದಿನಾಂಕಃ-28-07-2026.**

**(ನವೀನ್ ಕೋಪರ್ಡೆ.,)**
**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಮ್.ಎಫ್.ಸಿ.,ಯವರ ನ್ಯಾಯಾಲಯ.,ಹೊನ್ನಾವರ.**

****

ಆರೋಪಿಯ ಸಹಿಃ-ಸಹಿ ಇದೆ.